# ರಾಕ್ಷಸನ್ ತಿಂಬೋ ಭೀಕ್ಷಸ

ನಟೇಶ ಹೆಗಡೆ

**‘ಮಳೆ ಬಂತೋ ಮಾರಾಯ**

**ಕೊಡೆ ಹಿಡಿಯೋ ಸುಬ್ರಾಯ’**

ಮುದುಕಿ ರಾಗವಾಗಿ ಹಾಡಿದಳು. ಒಂದೋ ಮಳೆ ಬಂದಿರಬೇಕು ಇಲ್ಲವಾದಲ್ಲಿ ಸುಬ್ರಾಯ ಹೆಸರಿನ ಯಾವನೋ ಮನೆಯ ಎದುರು ಹಾದು ಹೋಗಿರಬೇಕು.

ಯೋಚಿಸುತ್ತಿದ್ದೆನೇ ಹೊರತು ಕಣ್ಣು ಬಿಡಲು ಆಗಲಿಲ್ಲ. ಕತ್ತಲು ರೂಮಿನಲ್ಲಿ ಮಲಗಿದ್ದೆ, ಸೂರ್ಯ ನೆತ್ತಿಗೆ ಏರುವ ಹೊತ್ತು ಎಂದು ಗಡಿಯಾರ ಹೇಳುತ್ತಿತ್ತು. ನನಗೆ ಗಡಿಯಾರದ ಮೇಲೆ ನಂಬಿಕೆಯಿಲ್ಲ, ಸೆಕೆಂಡಿನ ಮುಳ್ಳು ಸಹ ಒಂದೇ ಲಯದಲ್ಲಿ ಎಂದು ಅನ್ನಿಸಿದ್ದಿದೆ ಇನ್ನು ತಾಸು ನಿಮಿಷದ ಮುಳ್ಳನ್ನು ನೋಡುತ್ತ ಕುಳಿತಿದ್ದಿಲ್ಲ. ಸೆಕೆಂಡು ಮುಳ್ಳು ದಿಟ್ಟಿಸುತ್ತ ಕುಳಿತಾಗ ಒಮ್ಮೊಮ್ಮೆ ಅದು ನಿಂತು ಬಿಡುತ್ತದೆ,ಎದ್ದು ಹೋಗಿ ಕೈ ಬೆರಳಲ್ಲಿ ಆ ಮುಳ್ಳನ್ನು ಒತ್ತಿ ದೂಡಬೇಕು ಎನ್ನಿಸಿದರೂ ಎದ್ದು ಹೋಗಲು ಮನಸ್ಸೇ ಆಗುವುದಿಲ್ಲ. ನೋಡುವಷ್ಟು ನೋಡಿ ಕೊನೆಗೆ ಆ ಮುಳ್ಳೇ ಸೋತು ಹೆಜ್ಜೆ ಕೀಳುತ್ತದೆ. ಮಳೆ ಬಂತೋ ಎಂಬುದು ಇನ್ನೂ ಗೊಂದಲವಾಗಿಯೇ ಉಳಿದಿದೆ.

‘ಕೆಳಗಿನ ಮನೆಗೆ ಹೋಗಿ ಬರ್ತೆ, ಸಂಜೆ ಹೋಪ ಹೊತ್ತಿಗೆ ಬಂದು ಚಹಾ ಕುಡದು ಹೋಗ್ತೆ’ ಸುಬ್ರಾಯ ಜೋಯಿಸರ ದನಿ ಮಳೆ ಬಂದದ್ದಲ್ಲ ಎಂಬುದು ಖಾತ್ರಿಯಾಯಿತು."ಎದ್ದು ದೇವರಪೂಜೆ ಮಾಡಿ ಕೆಳಗಿನ ಮನೆ ಶ್ರಾದ್ಧಕ್ಕೆ ಹೋಗಿ ಬಂದ್ರೆ ನಿನ್ನ ಗಂಟು ಏನು ಹೋಪದು" ಮುದುಕಿಯ ಧ್ವನಿ ಕವುಚಿ ಮಲಗಿದ್ದ ನನ್ನ ತಲೆಯ ಬಲದಿಕ್ಕಿಗೆ ಸರಳ ರೇಖೆಯಂತೆ ಹಾದುಹೋಯಿತು, ದಿಂಬು ತೆಗೆದು ತಲೆಮೇಲಿಟ್ಟು ಒತ್ತಿಕೊಂಡೆ. ಒಮ್ಮೊಮ್ಮೆ ಕನಸಿನಲ್ಲಿ ಬಿಸಿಲು ಬರುತ್ತದೆ, ರಣ ಬಿಸಿಲು ಕಣ್ಣಿನ ತುಂಬೆಲ್ಲ ಆವರಿಸಿಕೊಳ್ಳುತ್ತದೆ. ಒಂತರದ ವಿಚಿತ್ರ ತ್ರಾಸು. ಮೈಮೇಲೆ ಬೆವರು ಟಿಸಿಲೊಡೆದು ಹೇಸಿಗೆ, ಈಗಲೂ ಹಾಗೆಯೇ ಆಯಿತು.

ಬಚ್ಚಲು ಮನೆಯ ಕಟ್ಟಿಗೆ ಕಣಿಯ ಹತ್ತಿರ ಮುದುಕಿಯ ಮತ್ತು ರಾಣಿಯ ದನಿ ಸಮ್ಮಿಳಿತವಾಗಿ ಬೆಳೆಯುತ್ತಲೇ ಹೋಗಿ ಗಲಾಟೆಯಾಯಿತು. ಕೋಲಾಟದ ಸದ್ದಿನಂತೆ ಕೇಳಿತು. ಏನನ್ನೋ ಬಡಿಯುತ್ತಿದ್ದಾಳೆ ಕೋಲಿನಿಂದ. ಕೋಲು ಎಂದಾಕ್ಷಣ ಒಣ ಕಟ್ಟಿಗೆಯೂ ಅದರ ಮೇಲಿನ ಹುಡಿಯೂ ಅದರ ಹುಳಿ ರುಚಿಯೂ ನೆನಪಾಗಿ ಮೈ ಕೊಡವಿಕೊಂಡು ಎದ್ದು ಕುಳಿತೆ. ಒಂದು ಕಣ್ಣು ಬಿಟ್ಟುಕೊಂಡು ಮನೆಹೊರಬಂದು ಲುಂಗಿ ಸುತ್ತಿಕೊಂಡಿದ್ದ ಅರೆ ಬೆತ್ತಲು ಮೈ ಕೆರೆಯುತ್ತಾ ಹೇಡಿಗೆಯ ಹಾದು ಪಡಿಮಾಡನ್ನು ಸುತ್ತುಹಾಕಿ ಬಚ್ಚಲಿಗೆ ಹೋದೆ. ಮುದುಕಿ ಕಟ್ಟಿಗೆ ಕಣಿಯ ಸಂದಿನಲ್ಲಿ ಕೋಲು ಕುಕ್ಕುತ್ತಿದ್ದಳು ನುಗ್ಗಿಹೋಗಲು ಹವಣಿಸುತ್ತಾ ರಾಣಿ ಬಾಲ ಸುತ್ತು ಆಡಿಸುತ್ತಾ ಕೂಗುತ್ತಿತ್ತು.

‘ಸಾಯ್ಲೋ...ಕುದುರು ಬಳ್ಳ ಹಾವು’ ಮುದುಕಿ ಕುಕ್ಕುತ್ತಲೇ ಇದ್ದಳು.

ಅವಳ ಕೈಯಿಂದ ಕೋಲು ಕಸಿದುಕೊಂಡು ಕೋಲಿನ ಕೊಕ್ಕರಿನಿಂದ ಹಾವನ್ನು ಹೊರಗೆಳೆದೆ. ಕುದುರುಬಳ್ಳ ಜಾತಿ ಹಾವೇ ಹೌದು. ಅದರ ಬಣ್ಣ ಮತ್ತದರ ಮಿಳಿದಾಟ ನೋಡಲಾಗದೇ ಅದರ ತಲೆಯನ್ನು ಒತ್ತಿಹಿಡಿದೆ, ಬಾಲದಿಂದ ಹತ್ತಾರು ಅಲೆಗಳು ಹುಟ್ಟಿ ಒತ್ತಿ ಹಿಡಿದ ಜಾಗ ತಲುಪಿದವು. ಒಮ್ಮೆಗೇ ಕೋಲು ಎತ್ತಿ ತಲೆಗೆ ಹೊಡೆದೆ ಜೋರಾಗಿ ಮಿಳಿದಾಡಿ ಸತ್ತಿತು.

ಕೋಲಿಗೆ ಹಾವನ್ನು ಜೋಲಿಸಿಕೊಂಡು ದೊಡ್ಡ ಕಾಲುವೆಯ ಬಳಿ ಹೋಗಿ ಬೀಸಿ ಎಸೆದೆ. ಟಪ್ ಎಂಬ ಸದ್ದು ಆಲಿಸಿಕೊಂಡು ರಾಣಿ ಅತ್ತ ಕಡೆ ಓಡಿದಳು.

‘ನಿನಗೆ ತಿಂಬಲ್ಲೆ ಏನು ಕಮ್ಮಿಯಾಗಿದೆಯೇ ರಂಡೆ’ ಕೂಗಿದೆ. ತಿರುಗಿ ಬಂದು ‘ಹಾವು ತಿಂದರೆ ಕುನ್ನಿ ಸಾಯ್ತುದೆಯೇ’ ಅಂದೆ ‘ಅದೇನು ತಲೆಭಾಗ ತಿಂಬದು ಸುಳ್ಳು’ ಅಂದಳು ಮುದುಕಿ. ಕೈ ತೊಳೆದು ಜಗುಲಿಗೆ ಮಲಗಿದೆ. ಒಂದು ತುದಿ ಭುಜಕ್ಕೂ ಮತ್ತೊಂದು ತುದಿ ಲುಂಗಿಗೂ ಸಿಕ್ಕಿ ಬಿಗಿಯಾಗಿದ್ದ ಜನಿವಾರ, ಉಸಿರಾಡಿದಂತೆಲ್ಲ ಹೊಟ್ಟೆಯ ಮೇಲಿನ ಕೂದಲನ್ನು ಮಲಗಿಸುತ್ತಾ ತಿರುಗಿ ಮತ್ತೆ ಏಳಿಸುತ್ತಾ ಹೊರಳಾಡುತ್ತಿತ್ತು. ಕಣ್ಣು ಮುಚ್ಚಿದೆ. ‘ಎಷ್ಟೊತ್ತಿಗಾದರೂ ಎದ್ದು ದೇವರಪೂಜೆ ಮಾಡು ಬಿಡು, ನಿನಗೂ ದೇವರಿಗೂ ಬಿಟ್ಟ ವಿಚಾರ, ಹಸಿವಿದ್ದರೆ ನಾಕು ತುತ್ತು ಉಣ್ಣು. ನಾನು ಕೆಳಗಿನ ಮನೆಗೆ ಹೊರಟೆ’ ಹೇಳಿ ಹೊರಟಳು ಮುದುಕಿ.

ಜಗುಲಿಯ ಬಾಗಿಲು ಮುಚ್ಚಿದ ಸದ್ದು. ಚಾಪೆಯ ಮೇಲಿನ ನಾನೂ ಇಪ್ಪತ್ತರ ಪ್ರಾಯದ ಟೀವಿ ಕಾಳುಮೆಣಸಿನ ಚೀಲ ಮುರಿದಲ್ಲೆಲ್ಲ ತಂತಿಯಿಂದ ಜೋಡಣೆ ಹಾಕಿದ ಪ್ಲಾಸ್ಟಿಕ್ ಕುರ್ಚಿಗಳೂ ಬಹಳ ಹೊತ್ತು ಒಬ್ಬರಿಗೊಬ್ಬರ ಸಾನಿಧ್ಯದಲ್ಲಿ ಅಲುಗಾಡದೆ ಇದ್ದೆವು. ವಿಪರೀತ ಹಸಿವಾಗಿ ಹೊಟ್ಟೆ ನಡುಗಲು ಶುರುವಿಟ್ಟಾಗ ನಾನೇ ಮೊದಲು ವ್ರತ ಭಂಗ ಮಾಡಿ ಎದ್ದು ಕುಳಿತೆ.

ಸ್ನಾನಕ್ಕೆ ಹೋದಾಗ ಬೆಳಿಗ್ಗೆ ಸಗಣಿ ಕರಡುವ ಕೆಲಸ ಮುಗಿದಿಲ್ಲ ಎಂದು ನೆನಪಾಯಿತು. ಬಯೋಗ್ಯಾಸಿನ ವೃತ್ತಾಕಾರದ ಸಿಲಿಂಡರು ಕುಸಿದಿತ್ತು. ಕೊಟ್ಟಿಗೆಗೆ ಹೋಗಿ ನೋಡಿದರೆ ಕಾಲು ಬುಡಕ್ಕೆ ಸಗಣಿ ಹಾಕಿಕೊಂಡು ಆಕಳುಗಳು ನಿಂತಿದ್ದವು. ಅವುಗಳನ್ನು ತೆಗೆದು ಸಗಣಿ ಕರಡುವ ಬಾನಿಗೆ ಹಾಕಿದೆ. ನೀರು ಕೊಟ್ಟು ಲುಂಗಿಯನ್ನು ಬಿಚ್ಚಿಟ್ಟು ಸಗಣಿ ಕರಡತೊಡಗಿದೆ. ನೆನಪುಗಳು ವಿಚಿತ್ರ ಕೆಲವು ವಸ್ತುಗಳೊಂದಿಗೆ ಬೆಸೆದುಕೊಂಡಿವೆ, ಕೆಲವು ಶಬ್ದಗಳೊಂದಿಗೆ. ಸಗಣಿ ಕರಡುತ್ತ ಹೋದಂತೆ ತೆಳು ರಾಡಿಯಾದ ಸಗಣಿ ನೋಡಿದಾಗ ಅದರಲ್ಲಿ ಬಿದ್ದು ಒದ್ದಾಡುತ್ತಿದ್ದ ಹೆಗ್ಗಣದ ನೆನಪಾಯಿತು. ಸ್ಲರಿಗುಂಡಿಯಲ್ಲಿ ಬಿದ್ದು ಒದ್ದಾಡುತ್ತಿದ್ದ ಅದನ್ನು ಕೋಲಿನಿಂದ ಕುಕ್ಕುತ್ತ, ಕೋಲುಕೊಟ್ಟು ಮೇಲೆ ಹತ್ತಿಸಿಕೊಂಡು ಮತ್ತೆ ಸ್ಲರಿಗುಂಡಿಗೆ ನೂಕುತ್ತ ನಾನು ನೆನಪಾಗುತ್ತೇನೆ. ಎಷ್ಟು ವರ್ಷದ ಕಥೆ ಇದು, ಗೊತ್ತಾಗಬೇಕೆಂದರೆ ಈಗಿನ ನನ್ನ ವಯಸ್ಸು ಬೇಕಲ್ಲ, ಆದರೆ ಲೆಕ್ಕ ಇಟ್ಟವರು ಯಾರು?

ಸಗಣಿ ಕರಡುವ ಬಾನಿಯನ್ನು ಒಂದು ದೊಡ್ಡ ಬೇಣೆಯಿಂದ ಮುಚ್ಚಲಾಗಿದೆ, ಸಗಣಿ ಸ್ಲರಿಯಾದಾಗ ಆ ಬೆಣೆಯನ್ನು ತೆಗೆಯುತ್ತೇನೆ. ಆಗ ಸ್ಲರಿ ನನ್ನ ಹೆಗ್ಗಣದ ನೆನಪುಗಳನ್ನೂ ಆ ಡೊಂಬದ ಒಳಗಿಳಿದು ಮಾಯವಾಗುತ್ತದೆ. ಸ್ನಾನ ಮುಗಿಸಿದೆ. ಹೂವು ಕೊಯ್ದು ಸಹ ಆಗಿರಲಿಲ್ಲ. ನಾಕಾರು ತುಂಬೆ ದಾಸವಾಳ ಹೂ ಕೊಯ್ದು, ತುಳಸಿ ಕಸ್ತ್ರವನ್ನು ಕೆಲಹೊತ್ತು ಮೂಸಿ ಮಡಿ ಉಟ್ಟು ದೇವರ ಎದುರಿಗೆ ಕುಳಿತೆ. ತುಪ್ಪದ ದೀಪದ ಬೆಳಕು, ಬಾಡಿದ ಹೂಗಳ ವಾಸನೆ, ತಣ್ಣಗಿದ್ದ ಮಣೆ. ದೇವರನ್ನು ಕೆಳಗಿಳಿಸಿ ಅಭಿಷೇಕ ಮಾಡಲು ಚೊಂಬಿನಲ್ಲಿ ತಣ್ಣೆ ಮುಳುಗಿಸಿದೆ. ನೀರು ತಂದಿಲ್ಲ ಎಂದು ನೆನಪಾಯಿತು. ಬಾವಿಗೆ ಓಡಿದೆ. ಬಾವಿಗೆ ಹೋಗುತ್ತಲೇ ದಿಂಬದ ಮೇಲಿದ್ದ ಕಪ್ಪೆ ಹಾರಿಕೊಂಡಿತು. ‘ನಿನ್ನನ್ನು ಹಿಡಿಯಲು ಬಂದವರು ಯಾರೆ?’ ಎಂದೆ. ಕೆಲಹೊತ್ತು ಬಿಸಿಲಿಗೆ ಮೈಯೊಡ್ಡಿ ಕುಳಿತಿರಬೇಕು ಅನಿಸಿತು. ಮತ್ತೆ ರಾಣಿ ಕೂಗಿದ ಮೇಲೆಯೇ ಮನೆಕಡೆ ಹೊರಟೆ. ಎಂಟು ಸುತ್ತು ಅಭಿಷೇಕ ಮಾಡಿ, ತೀರ್ಥ ಹಿಡಿದು ಹೂಗಂಧ ಹಚ್ಚಿ ದೇವರನ್ನು ಏರಿಸಿ ಪ್ರಧಾನ ಬಾಗಿಲಿನ ಪೂಜೆ ನೈವೇದ್ಯ ಎಲ್ಲ ಮುಗಿಸಿ, ಬಾಡಿದ ಹೂ ಅಭಿಷೇಕದ ನೀರು ಚೆಲ್ಲಲು ತೆಂಗಿನ ಮರದ ಬುಡಕ್ಕೆ ಹೋದಾಗ ಸಾಲಿಗ್ರಾಮವೂ ಹೂಗಳ ನಡುವಲ್ಲಿ ಅಡಗಿ ಕುಳಿತಿದು ಕಾಣಿಸಿತು. ತಿರುಗಿ ಬಂದು ಉಳಿದ ದೇವರುಗಳ ನಡುವಲ್ಲಿ ತುಳಸಿಯ ಸುಪ್ಪತ್ತಿಗೆಯ ಮೇಲೆ ಸಾಲಿಗ್ರಾಮ ಇಟ್ಟು ಮಡಿ ಬಿಚ್ಚಿ ಲುಂಗಿ ಉಡುವಾಗ ಅಪ್ಪಯ್ಯ ನೆನಪಾದ ಸಾಲಿಗ್ರಾಮದ ಕಾರಣದಿಂದಾಗಿ. ದೇವರ ಪೂಜೆ ಮುಗಿಸಿ ಚೆಡ್ಡಿ ಹಾಕಿಕೊಳ್ಳುತ್ತಿದ್ದೆ, ಮಡಿ ಕಾಲಬುಡದಲ್ಲಿ ಮುದ್ದೆಯಾಗಿ ಬಿದ್ದಿತ್ತು. ಜಗುಲಿಯ ಬಾಗಿಲಲ್ಲಿ ಅಪ್ಪಯ್ಯ ನಿಂತಿದ್ದ ಮುಷ್ಟಿಕಟ್ಟಿಕೊಂಡು ‘ಮಾಣಿ... ಏ ಮಾಣಿ .. ಮೈಮೇಲೆ ಕಬರಿದ್ದ ಇಲ್ಯ ನಿನಗೆ’ ಕೂಗಿದ. ‘ಎಂತಾ... ಆತು..?’ ಬೆಪ್ಪಾಗಿ ಕೇಳಿದೆ. ‘ತೆಂಗಿನ ಮರದ ಕೆಳಗೆ ಸಾಲಿಗ್ರಾಮ ಒಗೆದಿದ್ದೆ ನೋಡು’ ಬುಸುಗುಟ್ಟಿದ